ಮಾಡಲಾಗುವುದು. ಈಗ ಹಾಕಿರತಕ್ಕಂತಹ ತೆರಿಗೆಯಿಂದ ಬರತಕ್ಕಂತಹ ವರಮಾನ ಬಹಳ ಕಡಿಮೆ· ಆದ್ದರಿಂದ ಮಾನ್ಯ ಸದಸ್ಯರು ಹೇಳಿರತಕ್ಕಂತಹ ಎಲ್ಲ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡಿರುತ್ತೇವೆ· ಆದ್ದರಿಂದ ಈ ತಿದ್ದುಪಡಿಯನ್ನು ಸರ್ವಾನುಮತದಿಂದ ಒಪ್ಪಿಕೊಳ್ಳಬೇಕೆಂದು ಮಾನ್ಯ ಸದಸ್ಯರನ್ನು ಕೋರ್ಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇವೆ.

ವೈಸ್ ಛೇರ್ಮನ್.— ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮುತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ. —

ಕರ್ನಾಟಕ ರಾಜ್ಯದ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ ೧೯೮೩ನ್ನು ಸಭೆಯು ಪರಿಶೀಲಿಸುವುದು.

ಪ್ರಸ್ತಾವನೆ ಅಂಗೀಕರಿಸಲ್ಪಟ್ಟಿತು.

ಖಂಡಗಳ ಪರಿಶೀಲನೆ

ವೈಸ್ ಛೇರ್ಮನ್.—ಈಗ ವಿಧೇಯಕವನ್ನು ಖಂಡ ಖಂಡವಾಗಿ ಮುತಕ್ಕೆ ಹಾಕುತ್ತೇನೆ. ಪ್ರಸ್ತಾಪ ವೇನೆಂದರೆ, ೨ರಿಂದ ೨೨ನೇ ಖಂಡಗಳು ವಿಧೇಯಕದ ಅಂಗಗಳು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ರಿಂದ ೨೨ನೇ ಖಂಡಗಳು ವಿಧೇಯಕಕ್ಕೆ ಸೇರಿಸಲ್ಪಟ್ಟವು.

ಮೊದಲನೆಯ ಖಂಡ ಇತ್ಯಾದಿ

ವೈಸ್ ಛೇರ್ಮನ್.— ಪ್ರಸ್ತಾವವೇನೆಂದರೆ.—

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗಗಳು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗವಾಗಿ ಸೇರಿಸಲ್ಪಟ್ಟವು.

ಅನುಮೋದನ ಪ್ರಸ್ತಾವ

ವೈಸ್ ಛೇರ್ಮನ್.— ಮಾನ್ಯ ಮಂತ್ರಿಗಳು ಪ್ರಸ್ತಾವನೆಯನ್ನು ಮಂಡಿಸಬಹುದು.

ಶ್ರೀ ಎ. ಲಕ್ಷ್ಮೀಸಾಗರ್.— ಈ ಕೆಳಗಿನ ಪ್ರಸ್ತಾವವನ್ನು ಮಂಡಿಸುತ್ತೇನೆ. ಕರ್ನಾಟಕ ರಾಜ್ಯ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ ೧೯೮೩ನ್ನು ಸಭೆಯು ಅನುಮೋದಿಸುವುದು.

ವೈಸ್ ಛೇರ್ಮನ್.— ಪ್ರಸ್ತಾವ ಏನೆಂದರೆ ಕರ್ನಾಟಕ ರಾಜ್ಯ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ ೧೯೮೩ನ್ನು ಸಭೆಯು ಅನುಮೋದಿಸುವುದು.

(ಪ್ರಸ್ತಾವ ಅಂಗೀಕರಿಸಲ್ಪಟ್ಟು ವಿಧೇಯಕ ಅನುಮೋದಿಸಲ್ಪಟ್ಟಿತು)

ಕರ್ನಾಟಕ ರಾಜ್ಯ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ ೧೯೮೩.

ಪರಿಶೀಲನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು).—ಈ ಕೆಳಗೆ ಕಂಡ ಪ್ರಸ್ತಾವನೆಯನ್ನು ಮಂಡಿಸುತ್ತೇನೆ. ಕರ್ನಾಟಕ ರಾಜ್ಯದ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ ೧೯೮೩ನ್ನು ಸಭೆಯು ಪರಿಶೀಲಿಸುವುದು.

ಪ್ರಸ್ತಾವವನ್ನು ಸಭೆಯಲ್ಲಿ ಮಂಡಿಸಲಾಯಿತು.

ಶ್ರೀ ಎಂ. ವೀರಪ್ಪಮೊಯ್ಲಿ (ಕಾರ್ಕಳ).—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಮನರಂಜನಾ ತೆರಿಗೆ ಬರೇ ಸಿನಿಮಾಕ್ಕೆ ಮತ್ತು ಹೆಚ್ಚು ಎಂದರೆ ಕುದುರೆ ರೇಸ್‌ಗೆ ಮಾತ್ರ ಅನ್ವಯವಾಗುತ್ತಿತ್ತು. ಆದರೆ ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿರತಕ್ಕಂಥಾ ಕ್ರಿಕೆಟ್ ಫುಟ್‌ಬಾಲ್, ಹಾಕಿ, ಟೆನ್ನಿಸ್, ಪೆಟಲ್ ಕಾಕ್ ಇವಕ್ಕೆಲ್ಲಾ ವಿಸ್ತರಿಸಿದ್ದೀರಿ. ಈಗಲೂ ಸಮಯ ಮಿಂಚಿಲ್ಲ. ಇದರ ಬಗ್ಗೆ ಪುನ: ವಿಮರ್ಶೆ ಮಾಡಿದರೆ ಒಳ್ಳೆಯದು ಈ ಮನರಂಜನೆ ತೆರಿಗೆ ಏನು ಇದೆ ಇದನ್ನು ಕೆಲವು ಗೇಮ್ಸ್‌ಗೆ ಏತಕ್ಕೆ ಹಾಕುತ್ತಿದ್ದರು ಎಂದರೆ ಅಲ್ಲಿ ಬರತಕ್ಕಂಥಾ ಖರ್ಚನ್ನು ಸಮತೂಗಿಸಿಕೊಳ್ಳುವುದಕ್ಕೋಸ್ಕರ ಹಾಕುತ್ತಿದ್ದರು. ಸ್ಟೇಟ್ ಟ್ಯಾಕ್ಸ್‌ನ್ನು ಹಾಕಬೇಕಾದರೆ ಯಾವುದರ ಮೇಲೆ ಹಾಕಬೇಕು ಎಂದು ಪ್ರೊಫೆಸರ್ ಗುಲ್ವಾಟಿ ಸಮಿತಿಯವರು ಈ ಬಗ್ಗೆ ವ್ಯಾಪಕವಾದ ಚರ್ಚೆ ನಡೆಸಿ, ಚೆನ್ನಾಗಿ ಅಧ್ಯಯನ ಮಾಡಿ ಕೊನೆಗೆ ಕ್ರಿಕೆಟ್ ಮತ್ತು ಟೆನ್ನಿಸ್ ಮೇಲೆ ಈ ಎರಡು ಗೇಮ್ಸ್ ಮೇಲೆ ಈ ತೆರಿಗೆಯನ್ನು ಹಾಕಬಹುದು ಬಾಕಿ ಉಳಿದಿದ್ದುದರ ಮೇಲೆ ತೆರಿಗೆಯನ್ನು ಹಾಕಬೇಕಾದ ಅವಶ್ಯಕತೆ ಇಲ್ಲ ಎನ್ನುವುದನ್ನು ಹೇಳಿದ್ದಾರೆ ಆದುದರಿಂದ ಹಾಕಿ, ಫುಟ್‌ಬಾಲ್, ಪೆಟಲ್ ಕಾಕ್ ಇವುಗಳಿಗೆ ಹಾಕುವುದಾದರೆ ಅವರಿಗೆ ಇದನ್ನು ನಡೆಸ ತಕ್ಕಂಥಾ ಖರ್ಚೂ ಕೂಡ ಸಿಕ್ಕುವುದಿಲ್ಲ. ಕ್ರಿಕೆಟ್ ಮತ್ತು ಟೆನ್ನೀಸ್ ಮೇಲ್ಮಟ್ಟದ ವರ್ಗದ ಜನರು ನೋಡುವುದರಿಂದ ಅದರಲ್ಲಿ ಏನೂ ತೊಂದರೆಯಾಗುವುದಿಲ್ಲ. ಬಾಕಿ ಗೇಮ್ಸ್‌ನ್ನು ನೋಡುವುದಕ್ಕೆ ಬರುವಂಥಾ ಜನರೂ ಕಡಿಮೆ. ನೀವು ಇನ್ನೂ ಹೆಚ್ಚು ಹೊರೆಯನ್ನು ಹೊರಿಸುವುದಾದರೆ ಅವರಿಗೆ ಬಹಳ ಕಷ್ಟವಾಗುತ್ತದೆ. ಆದುದರಿಂದ ತಾವು ಇದನ್ನು ಪುನಃ ಆಲೋಚನೆ ಮಾಡತಕ್ಕಂಥಾದ್ದು ಒಳ್ಳೆಯದು. ತವ ಗೆ ಹೇಳಬೇಕಾದರೆ ನಮ್ಮ ಕಡೆ ಫುಟ್‌ಬಾಲ್ ಆಟ ಆಡುವುದು ಸ್ವಲ್ಪ ಹೆಚ್ಚು. ಆದರೂ ಆ ಅಸೋಸಿಯೇಷನ್‌ನವರಿಗೆ ದುಡ್ಡು ಇಲ್ಲದೆ ಕೊರತೆ ಬಜೆಟ್ ಆಗಿರುವುದರಿಂದ ಆವರು ಅಲ್ಲಿ ಏನೊಂದು ಸ್ಟೇಡಿಯಂ ಕಟ್ಟಿಸುತ್ತಿದ್ದಾರೆ, ಆದರ ಕೆಲಸ ಇನ್ನೂ ಪೂರ್ತಿಯಾಗಿ ಮಾಡುವುದಕ್ಕೆ ಆಗಿಲ್ಲ. ಈಗಲೂ ಕಾಲ ಮಿಂಚಿಲ್ಲ. ಬೇಕಾದರೆ ಕ್ರಿಕೆಟ್ ಮತ್ತು ಟೆನ್ನೀಸ್ ಮೇಲೆ ಹಾಕಿ, ಅಲ್ಲಿಗೆ ಜನ ಜಾಸ್ತಿ ಬರುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್ — ಈ ತೆರಿಗೆಯನ್ನು ಹಾಕಿರುವುದೇ ಕಡಿಮೆ. ಆದರಿಂದ ವಸೂಲಾನವೂ ಕೂಡ ಅಷ್ಟು ಹೆಚ್ಚಾಗಿ ಬರುವುದಿಲ್ಲ. ೧೫ ಲಕ್ಷ ಮಾತ್ರ ಬರುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್: —ಸರ್ಕಾರಕ್ಕೆ ೧೫ ಲಕ್ಷ ರೂಪಾಯಿ ಕಡಿಮೆ ಆದರೆ ಅದರಿಂದ ಏನೂ ಆಗುವುದಿಲ್ಲ. ಅಂಥಾ ಹೆಚ್ಚಿನ ತೆರಿಗೆಯೂ ಅಲ್ಲದೇ ಇರುವುದರಿಂದ ಇದನ್ನು ಪುನರ್ನಿರ್ಮಾ ಣಮಾಡುವುದು ಒಳ್ಳೆಯದು.

ಶ್ರೀ ಎಂ. ವೀರಪ್ಪಮೊಯ್ಲಿ.—ನಾವು ಇದ್ದಾಗ ಇದರ ಜೊತೆಗೆ ಇನ್ನೂ ಬೇರೆ ಬೇರೆ ಸಲಹೆಗಳು ಇದ್ದುವು. ಇದರ ಬಗ್ಗೆ ಸ್ಪೋರ್ಟ್ಸ್ ಸೆಸ್ ಹಾಕಬೇಕೆಂದು ನಮ್ಮ ಸರ್ಕಾರ ಇದ್ದಾಗ ಇದರ ಬಗ್ಗೆ ಒಂದು ವಿಧೇಯಕವನ್ನು ತಂದಿದ್ದೆವು. ಈ ಸೆಸ್‌ನಿಂದ ಬರತಕ್ಕಂಥಾ ಹಣವನ್ನು ಅಲ್ಲಿನ ಶಾಲೆಗಳಿಗೆ ಒದಗಿಸುವುದು ಮತ್ತು ಎಲ್ಲಿಲ್ಲಿ ಸ್ಟೇಡಿಯಂ ಇಲ್ಲ ಅಲ್ಲಿ ಸ್ಟೇಡಿಯಂ ಕಟ್ಟಿಕೊಡುವುದು ಹೀಗೆಲ್ಲಾ ಇತ್ತು.

ಶ್ರೀ ಕೆ.ಹೆಚ್. ರಂಗನಾಥ್.—ಈಗಲೂ ಕಾಲ ಮಿಂಚಿಲ್ಲ. ಯೋಚನೆ ಮಾಡಲಿ.

ಶ್ರೀ ಎಂ. ವೀರಪ್ಪಮೊಯ್ಲಿ.—ನಾನು ಈ ಬಗ್ಗೆ ಹೇಳಬೇಕಾದರೆ ನಮ್ಮ ರಾಜ್ಯದಲ್ಲಿ ಕ್ರಿಕೆಟ್ ಮತ್ತು ಟೆನ್ನಿಸ್‌ನಲ್ಲಿ ಸಾಕಷ್ಟು ಸಂಪನ್ಮೂಲಗಳನ್ನು ಒದಗಿಸಿಕೊಳ್ಳಬಹುದು ಏಕೆಂದರೆ ಅದನ್ನು ನೋಡತಕ್ಕಂಥಾ ಜನರ ಬಹಳ ಇದ್ದಾರೆ. ಎಷ್ಟು ತೆರಿಗೆ ಹಾಕಿದರೂ ಕೂಡ ಅವರು ಕೊಡುತ್ತಾರೆ ಬಾಕಿ ಸ್ಪೋರ್ಟ್ಸ್‌ನಲ್ಲಾದರೆ ಅಷ್ಟು ಆದಾಯ ಬರುವುದಿಲ್ಲ ಆದುದರಿಂದ ಅದರ ಮೇಲೆ ತೆರಿಗೆ ಹಾಕತಕ್ಕಂಥಾದ್ದು ಅಷ್ಟು ಸರಿಯಲ್ಲ. ಇವುಗಳ ಮೇಲೆ ಮನೋರಂಜನೆ ತೆರಿಗೆಯನ್ನು ಹಾಕುವುದಕ್ಕೆ ಪ್ರಪ್ರಥಮವಾಗಿ ತಾವು ತಂದಿದ್ದೀರಿ. ಇದನ್ನು ಪ್ರಯೋಗಾತ್ಮಕವಾಗಿ ತಂದಿದ್ದೀರಿ ಒಂದು ವೇಳೆ ಇದರಲ್ಲಿ ಆದಾಯ ಬಂದರೆ ಆ ಆದಾಯದಲ್ಲಿ ಅಲ್ಲಿಗೆ ಬೇಕಾದಂಥಾ ಸ್ಟೇಡಿಯಂ ವಗೈರೆ ಔಟ್‌ಹೌಸ್‌ಗಳನ್ನು ಮಾಡಿಕೊಡಬೇಕು. ಇದರಲ್ಲಿ ಅಷ್ಟು ಆದಾಯ ಬರದೇ ಹೋದರೆ ಪ್ರೊಫೆಸರ್ ಗುಲಾಹಟಿ ಸಮಿತಿ ಯವರ ವರದಿ ಪ್ರಕಾರ ಕ್ರಿಕೆಟ್ ಮತ್ತು ಟೆನ್ನಿಸ್ ಮೇಲೆ ಈ ಮನರಂಜನೆಯ ತೆರಿಗೆಯನ್ನು ಹಾಕಲೇ ಬೇಕಾಗುತ್ತದೆ. ಈಗ ತಾವು ಏನು ಒಂದು ತಿದ್ದುಪಡಿಯನ್ನು ಇದರ ಬಗ್ಗೆ ತಂದಿದ್ದೀರೋ ಇದಕ್ಕೆ ನನ್ನ ಒಂದು ಸಲಹೆ ಏನೆಂದರೆ ಈ ತಿದ್ದುಪಡಿಯ (ಬಿ)ನಲ್ಲಿ 15 percent of such payment ಅಂತ ಎನೂ ಹೇಳಿದ್ದೀರೋ ಆದನ್ನು ೫ ಪರ್ಸೆಂಟ್ ಮಾಡಿ (ಸಿ) ನಲ್ಲಿ 25 percent of such

payment ಅಂತ ಏನು ಹೇಳಿದ್ದೀರೋ ಅದನ್ನು ೧೦ ರೂಪಾಯಿ ಮಾಡಿ. ಈ ವಿಚಾರದಲ್ಲಿ ತಾವು ಪುನಃ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಟೆನ್ನಿಸ್ ಮತ್ತು ಕ್ರಿಕೆಟ್ ಬಹಳಷ್ಟು ಜನ ನೋಡುತ್ತಾರೆ. ಅದಕ್ಕೆ ತೆರಿಗೆ ಹಾಕಿದರೂ ಕೂಡ ಸಾಕಷ್ಟು ಸಂಪನ್ಮೂಲಗಳು ಬರುತ್ತದೆ. ಅಲ್ಲದೆ ಈ ಕ್ರೀಡಾ ಕ್ಷೇತ್ರವನ್ನು ಈ ಒಂದು ದಿಶೆಯಲ್ಲಿ ಅಭಿವೃದ್ಧಿಪಡಿಸಿ ವಿಸ್ತರಿಸಬೇಕು. ಅನೇಕ ಕ್ರೀಡೆಗಳಲ್ಲಿ ನಮ್ಮ ರಾಜ್ಯದ ಅನೇಕ ಕ್ರೀಡಾಪಟುಗಳು ಅತ್ಯುತ್ತಮ ಶ್ರೇಣಿಯನ್ನು ಪಡೆದು ಒಳ್ಳೆಯ ಹೆಸರು ತಂದಿದ್ದಾರೆ. ಆದುದರಿಂದ ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ನೀವು ಎರಡು ಗೇಮ್ಸ್ ಬಿಟ್ಟು ಉಳಿದವುಗಳಿಗೆ ವಿಸ್ತರಿಸುವುದು ಸರಿಯಲ್ಲ. ಇದನ್ನು ತಾವು ಚೆನ್ನಾಗಿ ಆಲೋಚನೆ ಮಾಡಿ. ಈ ಮಸೂದೆ ಈಪ್ಪೊತ್ತೇ ಏನು ಪಾಸಾಗಬೇಕಾಗಿಲ್ಲ. ನಾಳೆ ಪಾಸ್ ಮಾಡೋಣ. ನಾಳೆ ದಿವಸ ಈ ಒಂದು ಕ್ರೀಡಾ ಕ್ಷೇತ್ರದ ಮೇಲೆ ಯಾವ ಕೆಟ್ಟ ಪರಿಣಾಮವೂ ಬೀಳಬಾರದು ಅದಕ್ಕೆ ನಾನು ಹೇಳುತ್ತಿದ್ದೇನೆ. ಅಲ್ಲದೆ ಮಾನ್ಯ ಅಧ್ಯಕ್ಷರಾದ ಶ್ರೀ ರಾಮದೇವ್‌ರವರು ಕ್ರೀಡಾ ಅಧ್ಯಕ್ಷರೂ ಆಗಿರುವುದರಿಂದ ಇವರ ಅಧ್ಯಕ್ಷತೆಯಲ್ಲಿ ಈ ರೀತಿಯಾಗಿ ಈ ಮಸೂದೆಯನ್ನು ಪಾಸು ಮಾಡಿದರೆ ಕ್ರೀಡಾ ಕ್ಷೇತ್ರಕ್ಕೆ ಒಂದು ಅಘಾತವಾಯಿತು ಅನ್ನುವ ಮಾತು ಬರಬಾರದು ಅನ್ನುವುದಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ. ತಮ್ಮ ಅಧ್ಯಕ್ಷತೆಯಲ್ಲಿ ಇದರ ಬಗ್ಗೆ ಒಂದು ಕಠೋರವಾದ ಕಾರ್ಯಕ್ರಮ ತೆಗೆದುಕೊಳ್ಳಬಾರದು ತಮ್ಮ ಅಧ್ಯಕ್ಷತೆಯಲ್ಲಿ ಇದನ್ನು ಪಾಸು ಮಾಡಿದರೆ ನಮ್ಮ ಮಕ್ಕಳು ಮತ್ತು ಯುವಕರು ಈ ಕ್ರೀಡೆ ಬಗ್ಗೆ ಏನೋ ಒಂದು ಆಸೆ ಆಕಾಂಕ್ಷೆ ಇಟ್ಟುಕೊಂಡಿದ್ದರೋ ಅದು ನಿರಾಸೆಯಾಗಬಹುದು ಇದು ಒಂದು ದೊಡ್ಡ ಜವಾಬ್ದಾರಿ. ಇದರಬಗ್ಗೆ ತಾವು ಯೋಚನೆ ಮಾಡಬೇಕು. ನಾಳೆದಿವಸ ಇದರಿಂದ ಏನಾದರೂ ಕೆಟ್ಟ ಪರಿಣಾಮವಾದರೆ ಆ ಮಕ್ಕಳು ಮತ್ತು ಯಂವಕರು ಶ್ರೀಪಾನ್ . ಏ. ಲಕ್ಷ್ಮೀಸಾಗರ್ ಅವರಿಗೂ ತಮಗೂ ಶಾಪ ಹಾಕುತ್ತಾರೆ.

ಶ್ರೀ ಕೆ. ಹೆಚ್. ರಂಗನಾಥ್.—ಅವರಿಗೆ ಮದುವೆಯೇ ಆಗಿಲ್ಲ ಜವಾಬ್ದಾರಿ ಎಲ್ಲಿದೆ.?

ಶ್ರೀ ಜಿ ಹೆಚ್ ಪಟೇಲ್.—ಮದುವೆಯಾಗದೇ ಇದ್ದ ಮಾತ್ರ ಜವಾಬ್ದಾರಿ ಇಲ್ಲ ಅಂತ ಹೇಳುವುದಕ್ಕಾಗುವುದಿಲ್ಲ. ಮನೆಗೆ ಎಣ್ಣೆ ತರುವುದಾಗಲಿ, ಮಕ್ಕಳಿಗೆ ಬಟ್ಟೆ ಕೊಡಿಸುವುದಾಗಲಿ ಆ ಜವಾಬ್ದಾರಿ ಇಲ್ಲದೇ ಇರಬಹುದು. ಬೇರೆ ಇನ್ನಾವುದಾದರೂ ಜವಾಬ್ದಾರಿ ಇದ್ದೇ ಇರುತ್ತದೆ. ಆ ಮಾತನ್ನು ತಾವು ಒಪ್ಪುತ್ತೀರಾ ಸ್ವಾಮಿ?

ಚೇರ್ಮನ್ —ಒಪ್ಪುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಮಸೂದೆ ಈಪ್ಪೊತ್ತೇ ತುರಾತುರಿಯಾಗಿ ಪಾಸಾಗಬೇಕಾಗಿಲ್ಲ. ನಾಳೆ ಪಾಸ್ ಮಾಡೋಣ. ಇದರ ಬಗ್ಗೆ ಪುನರ್‌ವಿಮರ್ಶೆ ಮಾಡಿ ಟೆನ್ನಿಸ್ ಮತ್ತು ಕ್ರಿಕೆಟ್ ಬಿಟ್ಟು ಉಳಿದ್ದಕ್ಕೆ ವಿಸ್ತರಿಸಿದರೆ, ನಾನು ಮೊದಲೇ ಹೇಳಿದ ಹಾಗೆ ಅದರ ತೆರಿಗೆಯನ್ನಾದರೂ ಕಡಿಮೆ ಮಾಡಿ ಎಂದು ಹೇಳಿ ಬಯಸುತ್ತೇನೆ.

ಶ್ರೀ ಕೆ.ಬಿ. ಮಹೇಶ್ವರಪ್ಪ.—ಮಾನ್ಯ ಅಧ್ಯಕ್ಷರೇ ಇಲ್ಲಿ 'ಗೇಮ್' ಎನ್ನುವುದು ಡಿಫೈನ್ ಆಗಿದೆ.

'Game' means game of cricket. Football. Hockey shuttle-cock or Tennis excluding table tennis.

ಆ ಮೇಲೆ ಇದರ ಪ್ರಾವಿಸೋದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಆಟಗಳು ನಡೆದರೆ ಟ್ಯಾಕ್ಸ್ ಇರುವುದಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಫುಟ್‌ಬಾಲ್ ಆಡುತ್ತಾರೆ.

ಶ್ರೀ ಕೆ.ಎಚ್. ರಂಗನಾಥ್.—ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲಿ ಆಟಗಳು ನಡೆಯುತ್ತವೆ?

SRI K.B. MAHESWARAPPA.—If the game is conducted in the cities. Provided further that no entertainment tax shall be levied where the game is held outside the limits of a city or city Municipality". ಎಂದು ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ, ಈ ಆಟಗಳಿಗೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಇದು ಅನುಕೂಲವಾಗುತ್ತದೆ.

ಶ್ರೀ ಕೆ.ಎಚ್. ರಂಗನಾಥ್.—ಫುಟ್‌ಬಾಲ್ ಮತ್ತು ಹಾಕಿಗೆ ನಮ್ಮ ರಾಜ್ಯ ಪ್ರಸಿದ್ಧಿಯಾಗಿತ್ತು. ಬಂಗಾಳದವರು ಮೊದಲು ನಮ್ಮ ರಾಜ್ಯದವರನ್ನು ಕರೆದುಕೊಂಡು ಹೋಗಿ ನಮ್ಮವರಿಂದ ಕಲಿತು ಕೊಳ್ಳುತ್ತಿದ್ದರು. ತಾವು ಇಂಥ ತೆರಿಗೆಯನ್ನು ಹಾಕಿದರೆ ಇಂಥ ಆಟಗಳು ನಶಿಸಿ ಹೋಗುತ್ತವೆ.

ಚೇರ್ಮನ್.—ತೆರಿಗೆ ಆಟವನ್ನು ನೋಡುವವರ ಮೇಲೆ ಬೀಳುತ್ತದೆ.

ಶ್ರೀ ಕೆ.ಎಚ್. ರಂಗನಾಥ್.—ನೋಡುವವರು ಇಲ್ಲದಿದ್ದರೆ ಆಡುವವರು ಯಾರು ಇರುತ್ತಾರೆ?

ಚೇರ್ಮನ್.—ಏಷಿಯನ್‌ಗೇಮ್ಸ್‌ನಲ್ಲಿ ಬ್ಲಾಕ್ ಮಾರ್ಕೆಟ್‌ನಲ್ಲಿ ಟೀಕೇಟನ್ನು ಕೊಂಡುಕೊಂಡು ಆಟ ಗಳನ್ನು ನೋಡತಕ್ಕವರೂ ಇದ್ದರು.

ಶ್ರೀ ಭೀಮಣ್ಣ ಖಂಡ್ರೆ.—ಸ್ವಾಮಿ ಇಸ್ಪೀಟು ಆಟ ಆಡುತ್ತಾರೆ, ಇದರ ಮೇಲೆ ತಾವು ತೆರಿಗೆ ಯನ್ನು ಹಾಕುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಮೊಯಿಲಿಯವರು ಮಾತನಾಡುತ್ತಾ ನಾವು ವಿಧಿಸಿರುವಂಥ ತೆರಿಗೆಯಿಂದ ಕ್ರೀಡಾ ಚಟುವಟಿಕೆಗಳಿಗೆ ಮಾರಕವಾಗಬಹುದು ಎನ್ನುವ ಮಾತನ್ನು ಹೇಳಿದರು. ಅವರು ಈ ವಾದವನ್ನು ಎಲ್ಲಿಂದ ತಂದರೋ ಗೊತ್ತಾಗಲಿಲ್ಲ. ಈ ತೆರಿಗೆ ಕೇವಲ ಬೆಂಗಳೂರು ನಗರ ಮತ್ತು ಇತರ ಮುನಿಸಿಪಾಲಿಟಿಗಳ ವ್ಯಾಪ್ತಿಯಲ್ಲಿ ಬರತಕ್ಕ ಸ್ಥಳಗಳಲ್ಲಿ ಮಾತ್ರ ಅನ್ವಯವಾಗುತ್ತದೆ. ಅದನ್ನು ನಾನು ಇಲ್ಲಿ ಓದಿಬಿಡುತ್ತೇನೆ.

> "Provided that where the entertainment is a game held within the limits of a city as defined under Karnataka Municipal Corporations Act. 1976 or within the limits of a city Municipality constituted under the Karnataka Municipalities Act. 1964, entertainments tax shall be levied at the following rates".

ಶ್ರೀ ಕೆ.ಎಚ್. ರಂಗನಾಥ್.—ಎಲ್ಲೆಲ್ಲಿ ಸ್ಟೇಡಿಯಂಗಳು ಇವೆ ಅಲ್ಲಲ್ಲಿ ಆಡತಕ್ಕ ವ್ಯವಸ್ಥೆ ಇದ್ದರೆ ಅದನ್ನು ಕೇಳಿ ತೆರಿಗೆಯನ್ನು ಹಾಕುವುದಕ್ಕೆ ಹೋಗುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ಇದರಿಂದಾಗಿ ನಾವು ಕ್ರೀಡೆಗಳನ್ನು ಹತ್ತಿಕ್ಕತಕ್ಕ ಉದ್ದೇಶವನ್ನು ಹೊಂದಿಲ್ಲ. ಕ್ರೀಡಾ ಪಟುಗಳಿಗೆ ಎಷ್ಟು ಉತ್ತೇಜನ ಸಿಕ್ಕಬೇಕೋ ಯಾವ ರೀತಿಯಲ್ಲಿ ಸಿಕ್ಕಬೇಕೋ ಅದೆಲ್ಲವನ್ನೂ ಕೂಡ ಒಂದೆ ಮಾಡಿದ್ದುದಕ್ಕಿಂತ ಚೆನ್ನಾಗಿ ಮಾಡುತ್ತೇವೆ ಎನ್ನತಕ್ಕ ಭರವಸೆಯನ್ನು ಈ ಸಮಯದಲ್ಲಿ ನಾನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರನೇಕರು, ಮನರಂಜನೆ ತೆರಿಗೆ ಹಾಕಿರುವುದರಿಂದ ಈ ಆಟಗಳನ್ನು ಯಾರು ನೋಡುವುದಕ್ಕೆ ಹೋಗುತ್ತಾರೆಂದು ಉಲ್ಲೇಖ ಆಗಿದೆ. ಇಲ್ಲಿ ಆಡತಕ್ಕವರ ಮೇಲೆ ಇದರಿಂದ ಯಾವ ಪರಿಣಾಮವೂ ಆಗಿಲ್ಲ, ಗೇಟ್ ಮನಿಗೆ ತೆರಿಗೆ ಕೊಡ ಬೇಕಾಗಿಲ್ಲ, ಆದ್ದರಿಂದ ನಾವು ಈಗ ತೆರಿಗೆಯನ್ನು ಹಾಕಿದ್ದೇವೆ. ಅದು ಸಾರ್ವಜನಿಕ ದೃಷ್ಟಿಯಿಂದ ಮತ್ತು ಇದರಿಂದ ಬರತಕ್ಕ ಹಣವನ್ನು ಸಾರ್ವಜನಿಕ ಉಪಯೋಗಕ್ಕೆ ವಿಚರ್ಸ ಮಾಡತಕ್ಕ ದೃಷ್ಟಿಯಿಂದ ಇದನ್ನು ಹಾಕಿದ್ದೇವೆ. ಇದು ಕಡಿಮೆ ಪ್ರಮಾಣದಲ್ಲಿದ್ದರೂ ಕೂಡ, ಸರ್ಕಾರದ ಬೊಕ್ಕಸಕ್ಕೆ ಅವಶ್ಯಕವಾದ ಹಣ ಎಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಖಂಡ್ರೆಯವರು ರಮ್ಮಿ ಗೇಮ್ ಬಗ್ಗೆ ಹೇಳಿದರು. Game of Rummy is held to be not moral, it is a game of chance.

ಶ್ರೀ ಕೆ.ಎಚ್. ರಂಗನಾಥ್.—ರಮ್ಮಿ ಆಟ್ಲೇ ಅಲ್ಲ ಸ್ವಾಮಿ, ರಾಣಿ ಸಾಲು ಎಂದು ಆಡುತ್ತಾರೆ. ಒಳಗೆ-ಹೊರಗೆ ಎಂದು ಆಡುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಯಾವುದು ಅವರ ಮನಸ್ಸಿನಲ್ಲಿದೆಯೋ ಅದು ನನಗೆ ಗೊತ್ತಾಗಲಿಲ್ಲ. ಈಗ ತಂದಿರುವ ಮಸೂದೆಗೆ ಮಾನ್ಯ ಸಭೆಯವರು ಸರ್ವಾನುಮತದ ಒಪ್ಪಿಗೆಯನ್ನು ಕೊಡಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ.

ಚೇರ್ಮನ್.—ಪರಿಶೀಲನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ ಕರ್ನಾಟಕ ರಾಜ್ಯ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ ೧೯೮೩ನ್ನು ಸಭೆಯು ಪರಿಶೀಲಿಸುವುದು.

(ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು.)

ಖಂಡಗಳ ಪರಿಶೀಲನೆ

ಚೇರ್ಮನ್.—ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ ೨ ರಿಂದ ೪ ಖಂಡಗಳು ವಿಧೇಯಕದ ಅಂಗಗಳು.

(ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು)

(೨ರಿಂದ ೪ ಖಂಡಗಳು ವಿಧೇಯಕದ ಅಂಗವಾಗಿ ಸೇರಿಸಲ್ಪಟ್ಟವು).

ಮೊದಲನೆ ಖಂಡ, ಇತ್ಯಾದಿ.

ಚೇರ್ಮನ್.—ಪ್ರಸ್ತಾವವೇನೆಂದರೆ ಮೊದಲನೆಯ ಖಂಡ ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗಗಳು.

(ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು.)

ಮೊದಲನೆ ಖಂಡ ಹೆಸರು ಮತ್ತು ಅವತರಣಿಕೆಗಳು ಸೇರಿಸಲ್ಪಟ್ಟವು.

ಅನುಮೋದನಾ ಪ್ರಸ್ತಾವ.

ಚೇರ್ಮನ್ —ಈಗ ಮಾನ್ಯ ಮಂತ್ರಿಗಳು ಪ್ರಸ್ತಾವವನ್ನು ಮಂಡಿಸಬಹುದು.

ಶ್ರೀ ಎ. ಲಕ್ಷ್ಮೀಸಾಗರ್.—ಪ್ರಸ್ತಾವನ್ನು ಮಂಡಿಸುತ್ತೇನೆ. "ಕರ್ನಾಟಕ ರಾಜ್ಯ ಮನರಂಜನಾ ತೆರಿಗೆ ತಿದ್ದುಪಡಿ ವಿಧೇಯಕ ೧೯೮೩ನ್ನು ಸಭೆಯು ಅನುಮೋದಿಸುತ್ತದೆ".

ಚೇರ್ಮನ್.—ಪ್ರಸ್ತಾವವೇನೆಂದರೆ. ಕರ್ನಾಟಕ ರಾಜ್ಯ ಮನರಂಜನೇ ತೆರಿಗೆ (ತಿದ್ದುಪಡಿ) ವಿಧೇಯಕ ೧೯೮೩ನ್ನು ಸಭೆಯು ಅನುಮೋದಿಸುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟು ವಿಧೇಯಕ ಅನುಮೋದಿಸಲ್ಪಟ್ಟಿತು.

ಕರ್ನಾಟಕ ರಾಜ್ಯ ಬಳಕೆ, ಉಪಯೋಗ ಮತ್ತು ಮಾರಾಟಕ್ಕಾಗಿ ಸ್ಥಳೀಯ ಪ್ರದೇಶದೊಳಗೆ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕ, ೧೯೮೩.

ಪರಿಶೀಲನಾ ಪ್ರಸ್ತಾವ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಈ ಕೆಳಗೆ ಕಂಡ ವಿಧೇಯಕವನ್ನು ಸಭೆಯು ಪರಿಶೀಲನೆಗಾಗಿ ಮಂಡಿಸುತ್ತೇನೆ. ಕರ್ನಾಟಕ ರಾಜ್ಯ ಬಳಕೆ ಉಪಯೋಗ ಮತ್ತು ಮಾರಾಟಕ್ಕಾಗಿ ಸ್ಥಳೀಯ ಪ್ರದೇಶದೊಳಗೆ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ ಕರ್ನಾಟಕ (ತಿದ್ದುಪಡಿ) ವಿಧೇಯಕ ೧೯೮೩.